**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ,**

**ಹೆಚ್.ಡಿ.ಕೋಟೆ**

ಸಿ.ಸಿ.1155/2024

**ಪಿರ್ಯಾದುದಾರರು** **ಆರೋಪಿಗಳು**

**ವಿರುದ್ಧ**

ಹೆಚ್.ಡಿ.ಕೋಟೆ ಪೊಲೀಸ್ ಠಾಣೆ ಕುಳ್ಳಯ್ಯ ಮತ್ತು ಇತರರು

**:: ದೋಷಾರೋಪಣೆ ::**

**ಶ್ರೀ ಸಂತೋಷ ಕೊಠಾರಿ, ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಗಳು, ಹಚ್.ಡಿ.ಕೋಟೆ, ಆದ ನಾನು ನಿಮ್ಮ ಮೇಲೆ ಅಂದರೆಃ**

1. ಶ್ರೀ.ಕುಳ್ಳಯ್ಯ ಬಿನ್ ಲೇಟ್ ಚಂದ್ರಶೇಖರಯ್ಯ
   ವಯಸ್ಸು 52 ವರ್ಷ,
   ವಾಸಃ ಚರ್ಚ್ ರೋಡ್, ಹೌಸಿಂಗ್ ಬೋರ್ಡ್,
   ಹೊಸ ಬಡಾವಣೆ, ಹೆಚ್.ಡಿ.ಕೋಟೆ.
2. ಶ್ರೀ.ವಿನೋದ ಕೋಂ ಪುಟ್ಟಣ್ಣ
   ವಯಸ್ಸು 38 ವರ್ಷ,
3. ಶ್ರೀ.ಪುಟ್ಟಣ್ಣ ಬಿನ್ ಚಂದ್ರಶೇಖರಯ್ಯ
   ವಯಸ್ಸು 63 ವರ್ಷ,
4. ಶ್ರೀ.ರವೀಶ ಬಿನ್ ಬಸವರಾಜಪ್ಪ
   ವಯಸ್ಸು 36 ವರ್ಷ,
5. ಶ್ರೀ.ನಿದರ್ಶನ.ಹೆಚ್.ಆರ್
   ಬಿನ್ ಲೇಟ್ ರಾಜಣ್ಣ.ಹೆಚ್.ಸಿ
   ವಯಸ್ಸು 22 ವರ್ಷ,
   ಆರೋಪಿ 2 ರಿಂದ 5 ರವರ
   ವಿಳಾಸಃ ಹೊಸಹಳ್ಳಿ ಗ್ರಾಮ,
   ಹೆಚ್.ಡಿ.ಕೋಟೆ ತಾಲ್ಲೂಕು,
   ಮೈಸೂರು ಜಿಲ್ಲೆ.
6. ಶ್ರೀಮತಿ.ಅನುಸೂಯ
   ಕೋಂ ಕುಳ್ಳಯ್ಯ
   ವಯಸ್ಸು 45 ವರ್ಷ

ವಾಸಃ ಚರ್ಚ್ ರೋಡ್, ಹೌಸಿಂಗ್ ಬೋರ್ಡ್,

ಹೊಸ ಬಡಾವಣೆ, ಹೆಚ್.ಡಿ.ಕೋಟೆ.

**ಈ ಕೆಳಗಿನಂತೆ ದೋಷಾರೋಪಣೆ ಹೊರೆಸಿದ್ದೇನೆಃ**

ದಿನಾಂಕ 08.08.2024 ರಂದು ಬೆಳಿಗ್ಗೆ 08.45 ಗಂಟೆ ಸಮಯದಲ್ಲಿ ಹೆಚ್.ಡಿ.ಕೋಟೆ ಪೊಲೀಸ್ ಠಾಣಾ ವ್ಯಾಪ್ತಿಯ, ಹೊಸಹಳ್ಳಿ ಗ್ರಾಮದ ಸಾಕ್ಷಿ-4 ರವರ ಮನೆಯ ಮುಂದೆ ರಸ್ತೆಯಲ್ಲಿ ನಿಮ್ಮಗಳ ಪೈಕಿ 1 ನೇ ಆರೋಪಿಯಾದ ನೀವು ರಸ್ತೆಯಲ್ಲಿ ಮಳೆಯ ಬಿದ್ದ ನೀರು ತಮ್ಮ ಕಡೆಯ ಚರಂಡಿಗೆ ಬಾರದಂತೆ ಸಾಕ್ಷಿ-06 ರವರ ಮನೆಯ ಮುಂದೆ ಚರಂಡಿಯಲ್ಲಿ ಹೋಗುವಂತೆ ರಸ್ತೆಗೆ ಸಣ್ಣದಿಂಡನ್ನು ಹಾಕುತ್ತಾ ಬೈಯುತ್ತಿದ್ದಾಗ, ಸಾಕ್ಷಿ-01 ರವರು ತಿರುಗಾಡುವ ರಸ್ತೆಯಲ್ಲಿ ಏಕೆ ದಿಂಡನ್ನು ಹಾಕುತ್ತೀಯಾ ಮಳೆ ನೀರು ಮೇಲಿನಿಂದ ಬರುವುದನ್ನು ತಡೆಯಲು ಆಗುತ್ತಾ ಎಂದು ಕೇಳುತ್ತಿದ್ದಾಗ, ನಿಮ್ಮಗಳ ಪೈಕಿ 1 ನೇ ಆರೋಪಿಯಾದ ನೀವು ಸಾಕ್ಷಿ-1 ರವರನ್ನು ಕುರಿತು ಬಾಯಿಗೆ ಬಂದಂತೆ ಬೈದಿದ್ದಲ್ಲದೆ, ನಿಮ್ಮಗಳ ಪೈಕಿ 2, 4 ಮತ್ತು 5 ನೇ ಆರೋಪಿಗಳಾದ ನೀವುಗಳು ಸಾಕ್ಷಿ-1 ರವರನ್ನು ಹಿಡಿದುಕೊಂಡು ಕೆಟ್ಟದಾಗಿ ಬೈದಿದ್ದಲ್ಲದೆ, ನಿಮ್ಮಗಳ ಪೈಕಿ 6 ನೇ ಆರೋಪಿಯಾದ ನೀವು ಸಾಕ್ಷಿ-1 ರವರಿಗೆ ಇವಳನ್ನು ಬಿಡಬೇಡ ಎಂದು ಕೆಟ್ಟದಾಗಿ ಅವಾಚ್ಯ ಶಬ್ದಗಳಿಂದ ಬೈದಿದ್ದು, ಆ ಮೂಲಕ ಆರೋಪಿಗಳಾದ ನೀವುಗಳು ಭಾರತೀಯ ನ್ಯಾಯ ಸಂಹಿತೆ 2023 ಕಲಂ.352 ಸಹವಾಚಕ 3(5) ರನ್ವಯ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಎಸಗಿರುತ್ತೀರಿ ಎಂಬುದಾಗಿದೆ.

ಎರಡನೇಯದಾಗಿ ಮೇಲೆ ಹೇಳಿದ ಸ್ಥಳ, ಸಮಯ ಹಾಗೂ ದಿನಾಂಕದಂದು ಆರೋಪಿಗಳಾದ ನೀವುಗಳು ಕೃತ್ಯವನ್ನು ಮುಂದುವರೆಸುತ್ತಾ, ನಿಮ್ಮಗಳ ಪೈಕಿ 2, 4 ಮತ್ತು 5 ನೇ ಆರೋಪಿಗಳಾದ ನೀವುಗಳು ಸಾಕ್ಷಿ-1 ರವರನ್ನು ಹಿಡಿದುಕೊಂಡು ಕೆಟ್ಟದಾಗಿ ಬೈಯುತ್ತಾ ಕೈಯಿಂದ ಮೈಕೈಗೆ ಹೊಡೆದಿದ್ದು, ಅಲ್ಲದೆ ನಂತರ 3 ನೇ ಆರೋಪಿಯಾದ ನೀವು ಗಲಾಟೆ ಬಿಡಿಸಲು ಬಂದ ಸಾಕ್ಷಿ-2 ರವರನ್ನು ಕುರಿತು ಇವಳನ್ನು ಬಿಡಬಾರದೆಂದು ತಲೆಯ ಜುಟ್ಟನ್ನು ಹಿಡಿದು ಕೆಳಕ್ಕೆ ಬೀಳಿಸಿ ಕೈಯಿಂದ ಹೊಡೆದಿದ್ದು, ಅಲ್ಲದೆ 6 ನೇ ಆರೋಪಿಯಾದ ನೀವು ಸಾಕ್ಷಿ-2 ರವರ ಕೈಯಿಂದ ಮೈಕೈಗೆ ಹೊಡೆದು ನೋವುಂಟು ಮಾಡಿದ್ದು, ಅಲ್ಲದೆ ಬಿಡಿಸಲು ಬಂದ ಸಾಕ್ಷಿ-3 ರವರಿಗೆ 2 ನೇ ಆರೋಪಿಯಾದ ನೀವು ಕೈಯಿಂದ ಹೊಡೆದಿದ್ದು, ನಿಮ್ಮಗಳ ಪೈಕಿ 3 ಮತ್ತು 6 ನೇ ಆರೋಪಿಗಳಾದ ನೀವುಗಳು ಸಾಕ್ಷಿ-2 ರವರಿಗೆ ಕೆಟ್ಟದಾಗಿ ಬೈದು ಕೈಯಿಂದ ಹೊಡೆದು ನೋವುಂಟು ಮಾಡಿದ್ದು, ಆ ಮೂಲಕ ಆರೋಪಿಗಳಾದ ನೀವುಗಳು ಭಾರತೀಯ ನ್ಯಾಯ ಸಂಹಿತೆ 2023 ಕಲಂ. 115(2) ಸಹವಾಚಕ 3(5) ರನ್ವಯ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಎಸಗಿರುತ್ತೀರಿ ಎಂಬುದಾಗಿದೆ.

ಮೂರನೇಯದಾಗಿ ಮೇಲೆ ಹೇಳಿದ ಸ್ಥಳ, ಸಮಯ ಹಾಗೂ ದಿನಾಂಕದಂದು ಆರೋಪಿಗಳಾದ ನೀವುಗಳು ಕೃತ್ಯವನ್ನು ಮುಂದುವರೆಸುತ್ತಾ, ನಿಮ್ಮಗಳ ಪೈಕಿ 1 ನೇ ಆರೋಪಿಯಾದ ನೀವು ಸಾಕ್ಷಿ-01 ರವರಿಗೆ ಏಕಾಏಕಿ ಕಲ್ಲಿನಿಂದ ಬಲಭಾಗದ ಹಣೆಗೆ ಹೊಡೆದು ರಕ್ತಗಾಯಪಡಿಸಿದ್ದು, ಬಿಡಿಸಲು ಬಂದ ಸಾಕ್ಷಿ-02 ರವರಿಗೆ 1 ನೇ ಆರೋಪಿಯಾದ ನೀವು ಕರಣಿಯಿಂದ ಎಡತೋಳಿಗೆ ಹೊಡೆದು ರಕ್ತಗಾಯಪಡಿಸಿ, ಸಾಮಾನ್ಯ ಸ್ವರೂಪದ ಗಾಯಪಡಿಸಿದ್ದು, ಆ ಮೂಲಕ ಆರೋಪಿಗಳಾದ ನೀವುಗಳು ಭಾರತೀಯ ನ್ಯಾಯ ಸಂಹಿತೆ 2023 ಕಲಂ. 118(1) ಸಹವಾಚಕ 3(5) ರನ್ವಯ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಎಸಗಿರುತ್ತೀರಿ ಎಂಬುದಾಗಿದೆ.

ಕೊನೇಯದಾಗಿ ಮೇಲೆ ಹೇಳಿದ ಸ್ಥಳ, ಸಮಯ ಹಾಗೂ ದಿನಾಂಕದಂದು ಆರೋಪಿಗಳಾದ ನೀವುಗಳು ಕೃತ್ಯವನ್ನು ಮುಂದುವರೆಸುತ್ತಾ, ನಿಮ್ಮಗಳ ಪೈಕಿ 2 ನೇ ಆರೋಪಿಯಾದ ನೀವು ಸಾಕ್ಷಿ-3 ರವರನ್ನು ಕುರಿತು "ನಿಮ್ಮನ್ನು ಕೊಲೆ ಮಾಡದೆ ಬಿಡುವುದಿಲ್ಲ" ಎಂದು ಕೊಲೆ ಬೆದರಿಕೆ ಹಾಕಿದ್ದು, ಆ ಮೂಲಕ ಆರೋಪಿಗಳಾದ ನೀವುಗಳು ಭಾರತೀಯ ನ್ಯಾಯ ಸಂಹಿತೆ 2023 ಕಲಂ.351 ಸಹವಾಚಕ 3(5) ರನ್ವಯ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಎಸಗಿರುತ್ತೀರಿ ಎಂಬುದಾಗಿದೆ.

ಮೇಲಿನ ಆರೋಪಗಳಿಗೆ ಈ ನ್ಯಾಯಾಲಯದಲ್ಲಿ ವಿಚಾರಣೆಗೆ ಗುರಿಯಾಗುವಂತೆ ನಿಮಗೆ ನಿರ್ದೇಶಿಸಲಾಗಿದೆ.

24 ನೇ ಸೆಪ್ಟೆಂಬರ್ ಮಾಹೆ 2025.

-ಸಹಿ/-

**(ಸಂತೋಷ ಕೊಠಾರಿ)**

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು

ಪ್ರ.ದ.ನ್ಯಾ.ದಂ., ಹೆಚ್.ಡಿ.ಕೋಟೆ.